# ಕಣ್ಣಲ್ಲಿ ಸಕ್ಕರೆ



ಅಂದು ನಮ್ಮ ಮನೆಯಲ್ಲಿ ಹೋಮ ಏರ್ಪಡಿಸಲಾಗಿತ್ತು. ಮನೆ ತುಂಬಾ ನೆಂಟರಿಷ್ಟರು ನೆರೆದಿದ್ದರು. ಹೋಮಕ್ಕೆ ಉಪಯೋಗಿಸಿದ ಸೌದೆ ಸ್ವಲ್ಪ ಹಸಿಯಾಗಿದ್ದರಿಂದ ಬೆಂಕಿ ಹೊತ್ತಿಕೊಳ್ಳಲು ಸತಾಯಿಸುತ್ತಿತ್ತು. ಅದರಿಂದಾಗಿ ಮನೆಯೆಲ್ಲಾ ಹೊಗೆ. ಉರಿಯಿಂದ ಎಲ್ಲರ ಕಣ್ಣಲ್ಲಿ ನೀರು ಸುರಿಯುತ್ತಿದ್ದು, ಮೂಗನ್ನು ಸೊರ ಸೊರ ಏರಿಸುತ್ತಿದ್ದರು.

ಆಗ ನನ್ನ ಮೂರು ವರ್ಷದ ಮೊಮ್ಮಗಳು ಸಂಜನಾ ಓಡಿಬಂದು ಕಣ್ಣು ತಿಕ್ಕುತ್ತಾ, 'ಅಜ್ಜಿ, ನನ್ನ ಕಣ್ಣು ಖಾರ ಆಗಿದೆ, ಕಣ್ಣಲ್ಲಿ ಸ್ವಲ್ಪ ಸಕ್ಕರೆ ಹಾಕು' ಎಂದಳು. ಖಾರ ಹೆಚ್ಚಾದಾಗ ಬಾಯಲ್ಲಿ ಸಕ್ಕರೆ ಹಾಕುವುದನ್ನು ತಿಳಿದಿದ್ದ ಅವಳು ಹೇಳಿದ್ದನ್ನು ಕೇಳಿ ನೆರೆದವರೆಲ್ಲ ತಮ್ಮ ಕಣ್ಣುರಿಯನ್ನು ಮರೆತು ಖೊಳ್ಳನೆ ನಕ್ಕರು. ಆ ಪುಟಾಣಿ ನಾಚಿ ಅಲ್ಲಿಂದ ಪರಾರಿಯಾದಳು.

**ಸ್ಮಿತಾ ಜೋಶಿ, ಬೆಂಗಳೂರು**

# ಬಸರು ಹಾಳಂತಲ್ಲ!

ವಿಜಯಪುರದಲ್ಲಿ ನಾನು ನೌಕರಿ ಮಾಡುತ್ತಿದ್ದಾಗ, ಬೀದರನಿಂದ ವರ್ಗವಾಗಿ ನಮ್ಮ ಕಚೇರಿಗೆ ಮುಕುಂದ ಎಂಬುವರು ಬಂದರು. ಅವರ ಸ್ವಭಾವ, ಪ್ರಾಮಾಣಿಕ ಗುಣದಿಂದಾಗಿ ನನಗೆ ಆತ್ಮೀಯರಾದರು. ಕೌಟುಂಬಿಕ ವಿಷಯಗಳನ್ನು ಮಾತನಾಡುವಾಗ ನಾನು, 'ನನ್ನ ಹಿರಿಯ ಮಗಳು ಚೊಚ್ಚಲು ಹೆರಿಗೆಗಾಗಿ ಬಂದಿದ್ದಾಳೆ' ಎಂದು ಅವರಿಗೆ ಹೇಳಿದ್ದೆ. ಬಸುರಿಯರಿಗೆ ಬಯಕೆಗಳು ಸಹಜವೆಂಬ ಕಾರಣದಿಂದ, ನನ್ನ ಮಗಳಿಗೆ ತಿನ್ನಲು ಅವರು ಮಾರುಕಟ್ಟೆಯಿಂದ ನೀರಲ ಹಣ್ಣು ತಂದಿದ್ದರು. ಅಪರಿಚಿತರು ಎಂಬ ಕಾರಣದಿಂದ, ನನ್ನ ಮಗಳು ಒಳಗಿನ ರೂಮಿನಲ್ಲಿಯೇ ಓದುತ್ತಾ ಕುಳಿತಿದ್ದಳು. ನನ್ನ ತಾಯಿ ನಮ್ಮ ಹತ್ತಿರವೇ ಕುಳಿತಿದ್ದಳು. ಹಿರಿಯರು ಎಂಬ ಗೌರವದಿಂದ ಮುಕುಂದ ಅವರು 'ನಮಸ್ಕಾರ ತಾಯಿ! ನಾನು ಮುಕುಂದ ಅಂತಾ, ಬೀದರಿನವನು. ಚೆನ್ನಾಗಿದ್ದೀರಾ?! ಏನು ನಿಮ್ಮ ಮೊಮ್ಮಗಳು ಬಸರು ಹಾಳಂತಲ್ಲ! ಅದಕ್ಕೇ ತಿನ್ನಲು ಅವಳಿಗೆ ಈ ಹಣ್ಣು ತಂದಿದ್ದೇನೆ' ಅಂದರು. 'ದೇವರ ದಯದಿಂದ ಆಕೆಯ ಬಸರು ಛಲೋ ಅಯ್ತುಪ್ಪಾ! ನೀನು 'ಹಾಳು–ಗೀಳು' ಅಂತಾ ಕೆಟ್ಟದ್ದು ಅನ್ನಬೇಡ!' ಎಂದು ಅಸಮಾಧಾನದಿಂದ ನುಡಿದಳು. ಮುಕುಂದ ತಬ್ಬಿಬ್ಬಾದರು! ಬೀದರ ಜಿಲ್ಲೆಯಲ್ಲಿ 'ಇದ್ದಾಳೆ' (ಜನಪದ ಶಬ್ದ 'ಅದಾಳ') ಅನ್ನುವುದಕ್ಕೆ 'ಹಾಳಂತಲ್ಲ' ಅನ್ನುವ ಪದ ಬಳಕೆಯಲ್ಲಿದೆ ಎಂಬುದನ್ನು ನಾನು ನಮ್ಮ ತಾಯಿಗೆ ವಿವರಿಸಿದೆ. ಆಗ ಎಲ್ಲರಿಗೂ ಸಮಾಧಾನವಾಯಿತು.

**ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ**

